Ref.No.54/2020, Further cross of WW–1, Page No.11

ದಿನಾಂಕಃ 26–10–2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ– 2 ನೇ ಪಾರ್ಟಿ ಪರವಾಗಿಃ ಶ್ರೀ.JP ವಕೀಲರಿಂದ

ನಿಮ್ಮ ಯೂನಿಯನ್ನಲ್ಲಿ 30 ಜನ ಯಾರ್ಯಾರು ಸದಸ್ಯರು ಎಂದು ತೋರಿಸುವ ದಾಖಲಾತಿಯನ್ನು ಈ ದಿವಸ ನ್ಯಾಯಾಲಯಕ್ಕೆ ತಂದಿದ್ದೀರಾ ಮತ್ತು ಹಾಜರುಪಡಿಸುತ್ತೀರಾ ಎಂದರೆ ಸಾಕ್ಷಿ ಎಂ.ವಿ.ಡಿ.ಇ. ವರ್ಕರ್ಸ್ ಅಸೋಸಿಯೇಷನ್ ಮೈಸೂರು ಲೆಟರ್ ಹೆಡ್ ನ ಮೇಲೆ ನಮೂದಿಸಿರುವ 32 ಜನ ಸದಸ್ಯರ ಪಟ್ಟಿಯನ್ನು ಹಾಜರುಪಡಿಸಿರುತ್ತಾರೆ ಅದನ್ನು **ಡಬ್ಲ್ಯೂ-33** ಎಂದು ಗುರುತಿಸಲಾಯಿತು. ಡಬ್ಲ್ಯೂ–33 ರಲ್ಲಿ ನಮೂದು ಮಾಡಿರುವ 32 ಜನ ಕಾರ್ಮಿಕರು ಸಂಸ್ಥೆಯಲ್ಲಿ ಇವತ್ತು ಕೆಲಸ ಮಾಡುತ್ತಾ ಇದ್ದಾರೆ ಎಂದರೆ ಸಾಕ್ಷಿ ಇವತ್ತಿಗೆ 22 ಜನ ಮಾತ್ರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ನೀವು 22 ಜನರ ಪರವಾಗಿ ಸಾಕ್ಷಿ ಹೇಳುತ್ತಿದ್ದೀರಾ ಅಥವಾ 32 ಜನರ ಪರವಾಗಿ ಸಾಕ್ಷಿ ಹೇಳುತ್ತಿದ್ದೀರಾ ಎಂದರೆ ಸಾಕ್ಷಿ 32 ಜನರ ಪರವಾಗಿ ಸಾಕ್ಷಿ ಹೇಳುತ್ತಿದ್ದೇನೆ ಎನ್ನುತ್ತಾರೆ. 32 ಜನರು ಅವರ ಪರವಾಗಿ ನಿಮಗೆ ಸಾಕ್ಷಿ ನುಡಿಯಲು ಅಧಿಕಾರ ಪತ್ರ ನೀಡಿದ್ದಾರಾ ಎಂದರೆ ಸಾಕ್ಷಿ ನಾನು ಯೂನಿಯನ್ ಜನರಲ್ ಸ್ಕ್ರೆಟರಿ ಆಗಿದ್ದೆ ಆದುದರಿಂದ ಸಾಕ್ಷಿ ಹೇಳುತ್ತಿದ್ದೇನೆ ಎನ್ನುತ್ತಾರೆ. ಎಂ.ವಿ.ಡಿ.ಇ. ವರ್ಕರ್ಸ್ ಅಸೋಸಿಯೇಷನ್ ಮೈಸೂರು ರ ಬೈಲಾ ಇದೆಯಾ ಎಂದರೆ ಸಾಕ್ಷಿ ಬೈಲಾ ಇದೆ ಎನ್ನುತ್ತಾರೆ. ಸದರಿ ಬೈಲಾ ವನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿಲ್ಲ ಎನ್ನುತ್ತಾರೆ. ಬೈಲಾ ಹಾಜರುಪಡಿಸಲು ತೊಂದರೆ ಇಲ್ಲ ಮಾಡಬಹುದು. Charter of demand dated 12.02.2018 ರ ಡಿಮ್ಯಾಂಡ್ಸನ್ನು ಕಂಪನಿಗೆ ಸಲ್ಲಿಸುವ ಮೊದಲು ಜನರಲ್ ಬಾಡಿನಲ್ಲಿ ಅದಕ್ಕೆ ಒಪ್ಪಿಗೆ ತೆಗೆದುಕೊಂಡಿದ್ದೇವೆ. ನಾನು ಯೂನಿಯನ್ನಿನ  ಜನರಲ್ ಸ್ಕ್ರೆಟರಿ ಆಗಿ ಸಾಕ್ಷಿ ನುಡಿಯುತ್ತಿದ್ದೇನೆ. ಯೂನಿಯನ್ ಪರವಾಗಿ ಮತ್ತು ವರ್ಕರ್ಸ್ ಪರವಾಗಿ ಸಹಿ ಮಾಡಲು ಸ್ಕ್ರೆಟರಿ ಆಗಿ ನನಗೆ ಅಧಿಕಾರ ಇರುತ್ತದೆ. ಸ್ಕ್ರೆಟರಿ ಆಗಿ ನಾನು ಏನು ತೀರ್ಮಾನ ತೆಗೆದುಕೊಳ್ಳುತ್ತೇನೆ ಅದು ಅಂತಿಮವಾಗಿರುತ್ತದೆ ಮತ್ತು ಕೆಲವೊಂದು ಸಂಧರ್ಭದಲ್ಲಿ ಸದಸ್ಯರು ಕೇಳುತ್ತಾರೆ.  Charter of demand ಸಲ್ಲಿಸುವ ಸಂದರ್ಭದಲ್ಲಿ

ನಾನು ಸೆಕ್ರೆಟರಿ ಆಗಿದ್ದೆ ಮತ್ತು ಹಾಲಿ ಈಗ ನಾನು ಸೆಕ್ರೆಟರಿ ಆಗಿಲ್ಲ. ಈಗ ಜನರಲ್ ಸೆಕ್ರೆಟರಿ ಆಗಿ ಗಣೇಶ್ ಮೂರ್ತಿ ಇದ್ದಾರೆ ಮತ್ತು ಸೆಕ್ರೆಟರಿ ಆಗಿ ಸುರೇಶ್ ಇದ್ದಾರೆ. ಈಗ ನೀವು ತೆಗೆದುಕೊಳ್ಳುವ ನಿರ್ದಾರಗಳು ಎಲ್ಲಾ ಸದಸ್ಯರ ಮೇಲೆ ಅನ್ವಯ ಆಗುವುದಿಲ್ಲ ಎಂದರೆ ಸಾಕ್ಷಿ ಆಗುತ್ತದೆ ಎನ್ನುತ್ತಾರೆ. ಈಗ ಇರುವ ಜನರಲ್ ಸೆಕ್ರೆಟರಿ ಮತ್ತು ಸೆಕ್ರೆಟರಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇಲ್ಲ ಎಂದರೆ ಸಾಕ್ಷಿ Charter of demand ನ್ನು ನಾನು ಸಹಿ ಮಾಡಿ ಸಲ್ಲಿಸಿದ್ದೇನೆ ಆದ್ದರಿಂದ ನಾನು ಸಾಕ್ಷಿ ನುಡಿಯಲು ಬಂದಿದ್ದೇನೆ ಎನ್ನುತ್ತಾರೆ. ಗಣೇಶ್ ಮೂರ್ತಿ ಮತ್ತು ಸುರೇಶ್ ಈಗಲೂ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ನನ್ನನ್ನು ಸೆಕ್ರೆಟರಿಯಿಂದ ತೆಗೆದು ಬೇರೆಯವರನ್ನು ಸೆಕ್ರೆಟರಿ ಮಾಡಿದ ಬಗ್ಗೆ ರೆಸಲ್ಯೂಷನ್ ಇದೆ ಮತ್ತು ಅದನ್ನು ಹಾಜರುಪಡಿಸುತ್ತೇನೆ. ಯಾನಿಯನ್ನಿನ ಆಗು ಹೋಗುಗಳ ಬಗ್ಗೆ ನನಗೆ ಮಾಹಿತಿ ಇದೆ. ನಿಡಬ್ಲ್ಯೂ-33 ರಲ್ಲಿ ಜನರಲ್ ಸೆಕ್ರೆಟರಿ ಆಗಿ ಅಜಯ್ ಎಸ್ ಎಂದು ನಮೂದು ಇದೆ ಮತ್ತು ಗಣೇಶ್ ಮೂರ್ತಿಯ ಹೆಸರು ಜನರಲ್ ಸೆಕ್ರೆಟರಿ ಆಗಿ ಇಲ್ಲ ಎಂದರೆ ಸಾಕ್ಷಿ ದಾಖಲಾತಿಯನ್ನು ನೋಡಿ ನಿಡಬ್ಲ್ಯೂ-33 ಕರೆಕ್ಟಾಗಿದೆ ಎಂದು ಹೇಳುತ್ತಾರೆ. ನಿಮ್ಮ ಸಂಸ್ಥೆಯಲ್ಲಿ ಎಲ್ಲಾ ಎಂಪ್ಲಾಯೀಸ್ಗೆ ನಂಬರ್ ಕೊಟ್ಟಿದ್ದಾರೆ ಎಂದರೆ ಸರಿ. ನಿಡಬ್ಲ್ಯೂ-33 ರಲ್ಲಿ ಸದಸ್ಯರ ಹೆಸರಿನ ಮುಂದೆ ಅವರ ಎಂಪ್ಲಾಯ್ಮೆಂಟ್ ನಂಬರ್ ನಮೂದಿಸಿಲ್ಲ ಎಂದರೆ ಸರಿ. ನಿಡಬ್ಲ್ಯೂ-33 ರಲ್ಲಿ ತೋರಿಸಿರುವ ಸದಸ್ಯರು ನಮ್ಮ ಯೂನಿಯನ್ ಸದಸ್ಯರು ಎಂದು ತೋರಿಸಲು ದಾಖಲಾತಿಯನ್ನು ಹಾಜರು ಮಾಡಿಲ್ಲ. 2018 ರವರೆಗೂ ಕಾರ್ಮಿಕರಿಗೂ ಮತ್ತು ಕಂಪನಿಗೂ ಒಳ್ಳೆಯ ಸಂಬಂಧ ಇತ್ತು ಎಂದರೆ ಸರಿ . 2018 ಕ್ಕಿಂತ ಮುಂಚೆ ಏನೇ ಸಮಸ್ಯೆಗಳಿದ್ದರೂ ಮಾತುಕತೆ ಮೂಲಕ ಪರಿಹಾರ ಮಾಡುತ್ತಿದ್ದರು ಎಂದರೆ ಸಾಕ್ಷಿ ಕೆಲವು ಮಾಡುತ್ತಿದ್ದರು ಮತ್ತು ಕೆಲವು ಮಾಡುತ್ತಿರಲಿಲ್ಲ ಎನ್ನುತ್ತಾರೆ. Charter of demand dated 12,02.2018 ರ ಡಿಮ್ಯಾಂಡ್ಸನ್ನು ನೀವು ಕಂಪನಿಗೆ ಸಲ್ಲಿಸಿಲ್ಲ ಮತ್ತು ನೇರವಾಗಿ ಕಾರ್ಮಿಕ ಇಲಾಖೆಗೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಡಿಮ್ಯಾಂಡ್ ಸಲ್ಲಿಸಲು ಹೋದಾಗ ತಿರಸ್ಕರಿಸಿದರು ನಂತರ ಕಾರ್ಮಿಕ ಇಲಾಖೆಗೆ ಸಲ್ಲಿಸಿದ್ದೇನೆ ಎನ್ನುತ್ತಾರೆ. ಯಾವ ದಿನಾಂಕದಂದು ನೀವು Charter of demand ನ್ನು ಸಲ್ಲಿಸಲು ಹೋಗಿದ್ದೀರಿ

ಎಂದರೆ ಸಾಕ್ಷಿ ನಿಖರವಾಗಿ ದಿನಾಂಕ ಗೊತ್ತಿಲ್ಲ ಯೂನಿಯನ್ನಿನ ಪದಾಧಿಕಾರಿಗಳು ಹೋಗಿದ್ದಾರೆ ಎನ್ನುತ್ತಾರೆ. ಯಾವ ದಿನಾಂಕದಂದು Charter of demand ನ್ನು ಸಲ್ಲಿಸಬೇಕೆಂದು ಯೂನಿಯನ್ನಲ್ಲಿ ಮಾತುಕತೆ ಆಯಿತು ಎಂದರೆ ಸಾಕ್ಷಿ 26 ನೇ ತಾರೀಖು , ತಿಂಗಳು ಗೊತ್ತಿಲ್ಲ , 2018 ರಲ್ಲಿ ಸಲ್ಲಿಸಬೇಕೆಂದು ಯೂನಿಯನ್ನಲ್ಲಿ ಮಾತುಕತೆಯಾಯಿತು. ಯೂನಿಯನ್ನಲ್ಲಿ ಸದಸ್ಯರ ಜೊತೆ ಚರ್ಚೆ ಮಾಡಿ ನಂತರ Charter of demand ನ್ನು ಸಿದ್ಧಪಡಿಸಿದ್ದೇವೆ. ಪೋಸ್ಟ್ ಮೂಲಕ ಸಹ Charter of demand ನ್ನು ಸಲ್ಲಿಸಿದ್ದೇವೆ ಮತ್ತು ಅದನ್ನೂ ತಿರಸ್ಕಾರ ಮಾಡಿದ್ದಾರೆ. ಸದರಿ ತಿರಸ್ಕೃತಗೊಂಡ ಪೋಸ್ಟ್ ನ್ನು ನೀವು ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲಾತಿಗಳನ್ನು ನೋಡಿ ಹಾಜರುಪಡಿಸಿಲ್ಲ ಎನ್ನುತ್ತಾರೆ. ನೀವು ಆಡಳಿತ ಮಂಡಳಿಗೆ Charter of demand ನ್ನು ಸಲ್ಲಿಸಿಲ್ಲ ಮತ್ತು ಪೋಸ್ಟ್ ಮುಖಾಂತರ ಸಹ ಸಲ್ಲಿಸಿಲ್ಲ ಮತ್ತು ಕಂಪನಿಯವರು ತಿರಸ್ಕಾರ ಮಾಡಿಲ್ಲ ಎಂದರೆ ಸರಿಯಲ್ಲ ಮತ್ತು ನಿಡಬ್ಲ್ಯೂ-13 ರ ಪ್ರಕಾರ ಕಂಪನಿಯವರಿಗೆ Charter of demand ಬಗ್ಗೆ ಮಾಹಿತಿ ಇದೆ. ಕಂಪನಿಯವರು Charter of demand ನ್ನು ಸ್ವೀಕಾರ ಮಾಡಲು ತಿರಸ್ಕರಿಸಿದ ಎಷ್ಟು ದಿವಸಗಳ ನಂತರ ನೀವು Charter of demand ನ್ನು ಕಾರ್ಮಿಕ ಇಲಾಖೆಗೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ನಿಡಬ್ಲ್ಯೂ-2 ರ ಪ್ರಕಾರ ದಿನಾಂಕಃ15-2-2018 ರಂದು ಸಲ್ಲಿಸಿದ್ದೇವೆ ಎನ್ನುತ್ತಾರೆ. ಸಾಮಾನ್ಯವಾಗಿ ರಿಜಿಸ್ಟರ್ಡ ಪೋಸ್ಟ್ ತಿರಸ್ಕಾರಗೊಂಡು ವಾಪಸ್ಸು ಬರಲು 7 ದಿವಸಗಳು ತೆಗೆದುಕೊಳ್ಳುತ್ತದೆ. ದಿನಾಂಕಃ15-2-2018 ರ Charter of demand ನ್ನು ನೀವು 14-2-2018 ರಂದು ಸಿದ್ಧಪಡಿಸಿದ್ದೀರಾ ಮತ್ತು ಪೋಸ್್ಟ ನಲ್ಲಿ ಕಳುಹಿಸಿದ Charter of demand ಬಗ್ಗೆ ಕಂಪನಿಯವರು ತಿರಸ್ಕಾರ ಮಾಡುವುದಕ್ಕಿಂತ ಮುಂಚೆ ನೀವು ನೇರವಾಗಿ ಕಾರ್ಮಿಕ ಇಲಾಖೆಗೆ ಹೋಗಿ Charter of demand ಸಲ್ಲಿಸಿದ್ದೀರಾ ಎಂದರೆ ಸರಿಯಲ್ಲ. ನೀವು ಯೂನಿಯನ್ನನ್ನು ರಚನೆ ಮಾಡಿಕೊಂಡ ನಂತರ ಕಂಪನಿಯವರ ಜೊತೆ ಒಳ್ಳೆಯ ಸಂಬಂಧ ಇಟ್ಟುಕೊಳ್ಳಲು ಪ್ರಯತ್ನ ಪಟ್ಟಿಲ್ಲ ಮತ್ತು Hostile attitude ಇಟ್ಟುಕೊಂಡಿದ್ದೀರಾ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದು ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಪಿ.ಶ್ರೀನಿವಾಸ),
ಅಧ್ಯಕ್ಷಾಧಿಕಾರಿಗಳು,
ಔಧ್ಯಮಿಕ ನ್ಯಾಯಾಧೀಕರಣ,
ಮೈಸೂರು.